# ಅಕ್ಷಯ ಪಾತ್ರೆ – ಎಂಬ ವಿನೂತನ ಯೋಜನೆ

**ಗಜ ತುರಗ ಸಹಸ್ರಂ । ಗೋಕುಲಂ ಕೋಟಿ ದಾನಮ್**

**ಕನಕ ರಜತ ಪತ್ರಂ । ಮೇಧಿನಿ ಸಾಗರಂತಮ್**

**ಉಪಾಯ ಕುಲ ವಿಷುತ್ತಂ । ಕೋಟಿ ಕನ್ಯಾ ಪ್ರದಾನಮ್**

**ನಹಿ ನಹಿ ಬಹು ದಾನಂ । ಅನ್ನದಾನಂ ಸಮಾನಮ್**

**ತಾತ್ಪರ್ಯ:** "ಸಾವಿರ ಆನೆ ಅಥವಾ ಕುದುರೆಗಳ ದಾನ, ಕೋಟಿ ಗೋವುಗಳ ದಾನ, ಲೆಕ್ಕವಿಲ್ಲದಷ್ಟು ಬಂಗಾರ–ಬೆಳ್ಳಿ ಪಾತ್ರೆಗಳ ದಾನ, ಸಾಗರದಂಚಿನವರೆಗಿನ ಭೂದಾನ, ಕುಲವಿಶೇಷ ಅರ್ಪಿಸುವ ಸಮಾಜ–ಸೇವೆ ಇಲ್ಲವೇ ಕೋಟಿ ಕನ್ಯಾ ದಾನವೂ, ಅನ್ನದಾನಕ್ಕೆ ಸಮಾನವಲ್ಲ"

ಸಾಮಾನ್ಯತಃ ಮನುಷ್ಯನಿಗೆ ಜೀವನದಲ್ಲಿ ಸಾರ್ಥಕತೆಯ ಅವಶ್ಯಕತೆ ಸ್ವಲ್ಪ ತಡವಾಗಿಯೇ ಅರಿವಾಗುತ್ತದೆ. ಅನೇಕರಿಗೆ 'ಸಾರ್ಥಕತೆ ಎಂದರೇನು' ಎಂಬ ಅರಿವಾದಾಗ ದೈಹಿಕ, ಮಾನಸಿಕ ಸಾಮರ್ಥ್ಯ ಕುಗ್ಗಿ ಹೋಗಿರುತ್ತದೆ. ಈ ಸಮಾಜಕ್ಕೆ ನಾನೇನೂ ಕೊಟ್ಟಿಲ್ಲ ಎಂಬ ಅಪರಾಧಿ ಭಾವನೆ ನಿರಂತರವಾಗಿ ಕಾಡುತ್ತಿರುತ್ತದೆ. ಸಾರ್ಥಕತೆಯನ್ನು ಕಂಡುಕೊಳ್ಳುವ ಹಲವಾರು ದಾರಿಗಳಿದ್ದರೂ, ನಾನು ಏನನ್ನೂ ಮಾಡದೇ ಈ ಜನುಮ ವ್ಯರ್ಥವಾಯಿತಲ್ಲಾ? ಎಂಬ 'ಅಪರಾಧಿ ಪ್ರಜ್ಞೆ' ಬಂದು ಹೋಗುತ್ತಿರುತ್ತದೆ. **ಯೋಗ್ಯಪಾತ್ರರಿಗೆ ಅನ್ನದಾನ ಮಾಡುವದು** ಸಾರ್ಥಕತೆಯನ್ನು ಕಂಡುಕೊಳ್ಳುವ ಹಲವು ವಿಧಾನಗಳಲ್ಲಿ ಅತ್ಯಂತ ಸುಲಭ ಹಾಗೂ ಸರಳವಾದ ವಿಧಾನ. ಈ ನಿಟ್ಟಿನಲ್ಲಿ ಅಕ್ಷಯ ಪಾತ್ರೆಯು ಆಸಕ್ತ ದಾನಿಗಳಿಗೆ ಸಾರ್ಥಕತೆಯನ್ನು ಕಂಡುಕೊಳ್ಳುವ ಸದವಕಾಶವನ್ನು ಒದಗಿಸಿಕೊಡುವ ಒಂದು ಚಿಕ್ಕ ಪ್ರಯತ್ನ. ಅಷ್ಟೇ ಅಲ್ಲದೇ ಈ ಪ್ರಯತ್ನ, ಪರಮ ಪೂಜ್ಯ **ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಗೆ** ಅತ್ಯಂತ ಸನಿಹವಾದ ಮತ್ತು ಪ್ರಿಯವಾದ ಯೋಜನೆ. ಅಕ್ಷಯ ಪಾತ್ರೆ ಯೋಜನೆಗೆ ಶ್ರೀಗಳವರ ವಿಶೇಷ ಆಶೀರ್ವಾದ ಹಾಗೂ ಅನುಗ್ರಹವಿದೆ !

ಹಾಗಿದ್ದರೆ **ಅಕ್ಷಯ ಪಾತ್ರೆ ಎಂದರೇನು** ಎಂಬ ಕುತೂಹಲವೇ? ಪರಮ ಪೂಜ್ಯ ಪೇಜಾವರ ಶ್ರೀಪಾದಂಗಳವರು ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಶಿಕ್ಷಣದ ಅನುಕೂಲಕ್ಕಾಗಿ ರಾಜ್ಯದಲ್ಲಿ ಅ.ಭಾ.ಮ.ಮಾ. ಅಡಿಯಲ್ಲಿ ಒಂಬತ್ತು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದ್ದಾರೆ. ಇವುಗಳಲ್ಲಿ ಧಾರವಾಡದಲ್ಲಿರುವ **ಪ್ರಹ್ಲಾದ ವಿದ್ಯಾರ್ಥಿ ನಿಲಯ**ವು ಅತ್ಯಂತ ಹಳೆಯದು. ಈ ವಿದ್ಯಾರ್ಥಿ ನಿಲಯ ಆಗಲೇ ಸುವರ್ಣ ಮಹೋತ್ಸವನ್ನು ಆಚರಿಸಿ ೬೦ ವಸಂತಗಳತ್ತ ಕಾಲಿಡುತ್ತಿದೆ. ಪ್ರಹ್ಲಾದ ವಿದ್ಯಾರ್ಥಿ ನಿಲಯದಲ್ಲಿದ್ದು ವಿದ್ಯಾಭ್ಯಾಸ ಮಾಡಿ ಇಲ್ಲಿಯವರೆಗೆ ಸಾವಿರಾರು ವಿದ್ಯಾರ್ಥಿಗಳು ಅನುಕೂಲ ಪಡೆದು ಅಧ್ಯಾತ್ಮಿಕವಾಗಿ ಮತ್ತು ಲೌಕಿಕವಾಗಿ ಅತ್ಯುನ್ನತ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಮಂತ್ರಾಲಯ ರಾಘವೇಂದ್ರಸ್ವಾಮಿಗಳ ಮಠದ ಅಧುನಾಪೀಠ ವಿರಾಜಮಾನರಾದ **ಶ್ರೀ ಶ್ರೀ ಸುಯತೀಂದ್ರ ತೀರ್ಥ ಶ್ರೀಪಾದಂಗಳವರು,** ನಾಡಿನ ಶ್ರೇಷ್ಠ ವಿದ್ವಾಂಸರಾದ ವ್ಯಾಸನಕೆರೆ ಪ್ರಭಂಜನಾಚಾರ್ಯರು, ವಿ. ನಾರಾಯಣಾಚಾರ್ಯ ಧೂಳಖೇಡ ನಿಲಯದಲ್ಲಿ ಕಲಿತು ಇವತ್ತು ಅಧ್ಯಾತ್ಮಿಕ ಕ್ಷೇತ್ರದಲ್ಲಿ ಮಹತ್ತರ ಕೊಡುಗೆಯನ್ನಿತ್ತಿದ್ದಾರೆ. ಅದೇ ರೀತಿ ಅನೇಕ ಹಳೆಯ ವಿದ್ಯಾರ್ಥಿಗಳು ಇಂಜಿನೀಯರಾಗಿ, ಖ್ಯಾತ ವೈದ್ಯರಾಗಿ, ವಿಶ್ವವಿದ್ಯಾಲಯಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿ, ಸಂಶೋಧಕರಾಗಿ ಅನೇಕ ರೀತಿಯಲ್ಲಿ ಸಾಮಾಜಿಕ ಸೇವೆಯಲ್ಲಿ ತೊಡಗಿದ್ದಾರೆ.

ಐದು ದಶಕಗಳ ಹಿಂದೆ ಇಂತಹ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವಾಗ ಪ.ಪೂ. ಪೇಜಾವರ ಶ್ರೀಗಳಿಗೆ ಇದ್ದ ಕನಸು 'ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆದಷ್ಟು ಕಡಿಮೆ ಖರ್ಚಿನಲ್ಲಿ ಸಾಧ್ಯವಿದ್ದ ಪಕ್ಷದಲ್ಲಿ ಉಚಿತವಾಗಿ

ಊಟ, ವಸತಿ ಒದಗಿಸಿ ಅವರಿಗೆ ಉತ್ತಮ ಸಂಸ್ಕಾರ ಮತ್ತು ಶಿಕ್ಷಣ ಸಿಗುವಂತೆ ಮಾಡಬೇಕು' ಎಂಬುದಾಗಿತ್ತು. ಕಾಲಾನುಕ್ರಮದಲ್ಲಿ ಹಣದುಬ್ಬರ ಮತ್ತು ಬೆಲೆಯೇರಿಕೆಯಿಂದಾಗಿ ಈ ಕನಸು ಇಲ್ಲಿಯವರೆಗೆ ಸಾಧ್ಯವಾಗಿಲ್ಲ. ಸಧ್ಯಕ್ಕೆ ಪ.ಪೂ. ಪೇಜಾವರ ಶ್ರೀಗಳ ಆಶೀರ್ವಾದದಿಂದ ಪ್ರಹ್ಲಾದ ವಿದ್ಯಾರ್ಥಿ ನಿಲಯದ ಹಳೆಯ ವಿದ್ಯಾರ್ಥಿಗಳು ಅಕ್ಷಯ ಪಾತ್ರೆ ಎಂಬ ವಿನೂತನ ಯೋಜನೆಯನ್ನು ಕೈಗೆತ್ತಿಕೊಂಡಿದ್ದಾರೆ.

ಅಕ್ಷಯ ಪಾತ್ರೆ ಯೋಜನೆಯಡಿಯಲ್ಲಿ, ವರ್ಷದ ೩೬೫ ದಿನವೂ ಬಡ ವಿದ್ಯಾರ್ಥಿಗಳಿಗೆ ನಿಲಯದಲ್ಲಿ ಉಚಿತ ಊಟವನ್ನು ಒದಗಿಸಿಕೊಡುವ ಸದುದ್ದೇಶ–ಸಾಮಾಜಿಕ ಕಳಕಳಿಯಿದೆ. ಸದ್ಯಕ್ಕೆ ಈ ಯೋಜನೆ ಧಾರವಾಡದ ಪ್ರಹ್ಲಾದ ವಿದ್ಯಾರ್ಥಿ ನಿಲಯಕ್ಕೆ ಮಾತ್ರ ಸೀಮಿತವಾಗಿದೆ. ದಾನಿಗಳ ಉತ್ಸಾಹ–ಆಸಕ್ತಿಯನ್ನು ಪರಿಗಣಿಸಿ ಭವಿಷ್ಯದಲ್ಲಿ ಇದನ್ನು ಉಳಿದ ಎಲ್ಲಾ ವಿದ್ಯಾರ್ಥಿ ನಿಲಯಗಳಿಗೂ ವಿಸ್ತರಿಸುವ ಉನ್ನತವಾದ ಗುರಿ, ಅಪೇಕ್ಷೆಯೂ ಇದೆ.

ಆಸಕ್ತಿಯುಳ್ಳ ದಾನಿಗಳು, ವರ್ಷದಲ್ಲಿ ತಮಗಿಷ್ಟವಾದ ಒಂದು ದಿನವನ್ನು ಆರಿಸಿಕೊಳ್ಳಬೇಕು. ಆ ದಿನ ತಮ್ಮ ಮಕ್ಕಳ ಅಥವಾ ಆತ್ಮೀಯರ ಹುಟ್ಟುಹಬ್ಬದ ದಿನವಾಗಿರಬಹುದು, ಮದುವೆಯ ವಾರ್ಷಿಕೋತ್ಸವವಾಗಿರಬಹುದು ಅಥವಾ ಹಿರಿಯರ ಕಾಲತಿಥಿಯಾಗಿರಬಹುದು, ಒಟ್ಟಿನಲ್ಲಿ ಅದು ನಾವು ನೆನಪಿಡಬೇಕಾದಂತಹ ದಿನವಾಗಿರುತ್ತದೆ! ಅಂತಹ ದಿನದಂದು, ನಿಲಯದ ಎಲ್ಲ ವಿದ್ಯಾರ್ಥಿಗಳಿಗೂ ದಾನಿಗಳ ಹೆಸರಿನಲ್ಲಿ ಊಟ ಹಾಕಿಸಲಾಗುತ್ತದೆ. ಬೇಕಿದ್ದರೆ, ಒಂದಕ್ಕಿಂತ ಹೆಚ್ಚು ದಿನವನ್ನು ಆರಿಸಿಕೊಳ್ಳುವ ಅವಕಾಶವೂ ದಾನಿಗಳಿಗೆ ಇದೆ. ಸಧ್ಯಕ್ಕೆ ಇದಕ್ಕಾಗಿ ದಾನಿಗಳಿಗೆ ತಗಲುವ ವೆಚ್ಚ **ವರ್ಷವೊಂದಕ್ಕೆ ಕೇವಲ ೧೨೦೦ ರೂಪಾಯಿಗಳು ಮಾತ್ರ**. ಈ ಯೋಜನೆಯನ್ನು ಪ್ರಕಟಪಡಿಸಿದ ಕೆಲವೇ ದಿನಗಳಲ್ಲಿ ದಾನಿಗಳಿಂದ ದೊರಕಿದ ಪ್ರೋತ್ಸಾಹ ತುಂಬ ಶ್ಲಾಘನೀಯ. ಇದೆ ವರ್ಷದ ಫೆಬ್ರುವರಿಯಲ್ಲಿ ಪ.ಪೂ. ಪೇಜಾವರ ಶ್ರೀಪಾದಂಗಳವರಿಂದ ಈ ಯೋಜನೆ ಉದ್ಘಾಟನೆಯಾಗಿದೆ. ಕೇವಲ ಮೂರು ತಿಂಗಳ ಅವಧಿಯಲ್ಲಿ, ಆಗಲೇ ನೂರು ಜನ ದಾನಿಗಳು ಆಸಕ್ತಿ ವ್ಯಕ್ತಪಡಿಸಿ ಹಣ ಸಂದಾಯ ಮಾಡಿದ್ದಾರೆ ! ಈ ಎಲ್ಲ ದಾನಿಗಳಿಗೆ, ನಿಲಯ ಫೌಂಡೇಷನ್ ಮತ್ತು ವಿದ್ಯಾರ್ಥಿನಿಲಯದ ಆಡಳಿತ ಮಂಡಳಿ ಚಿರಋಣಿ.

ಇನ್ನು ಒಂದರಿಂದ ಎರಡು ವರ್ಷಗಳ ಅವಧಿಯಲ್ಲಿ, ಅಕ್ಷಯ ಪಾತ್ರೆ ಯೋಜನೆಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸುವ ಸದುದ್ದೇಶ ನಮ್ಮದು. ಪೇಜಾವರ ಶ್ರೀಗಳಿಗೆ ಅತ್ಯಂತ ಪ್ರಿಯವಾದ, ಉತ್ತಮ ಸಾಮಾಜಿಕ ಕಳಕಳಿಯುಳ್ಳ ಈ ಪುಣ್ಯ ಕಾರ್ಯಕ್ಕೆ ತಾವೆಲ್ಲರೂ ಕೈ ಜೋಡಿಸಿ, ಅನ್ನದಾನದ ಸಾರ್ಥಕತೆಯನ್ನು ಪಡೆಯಬೇಕಾಗಿ ಸವಿನಯ ಪ್ರಾರ್ಥನೆ.

ಆಸಕ್ತಿಯುಳ್ಳ ದಾನಿಗಳು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ನಿಲಯ ಬಂಧುಗಳನ್ನು ಸಂಪರ್ಕಿಸಬೇಕಾಗಿ ವಿನಂತಿ.

೧. ಶ್ರೀ ಆನಂದತೀರ್ಥ ಗುತ್ತಲ, ಬೆಂಗಳೂರು (ಫೋನ್: 9845968032)

೨. ಶ್ರೀ ರಂಗನಾಥ ಯಾದವಾಡ, ಧಾರವಾಡ (ಫೋನ್ : 9448049909)